ಅ) ಹೌದು.

ಆ) ಫಲಾನುಭವಿಗಳನ್ನು ಗುರುತಿಸಿದ ನಂತರ ಮತ್ತು ನಿವೇಶನಗಳನ್ನು ಪಡೆದ ನಂತರ ಹಣ ಬಿಡುಗಡೆ ಮಾಡಲಾಗುವುದು.

ಇ) ಗ್ರಾಮಾಂತರ ಪ್ರದೇಶ ರೂ. 12,700 ರಿಂದ 18,000

ಪಟ್ಟಣ ಪ್ರದೇಶ ರೂ. 15,000

ತುಮಕೂರಿನಲ್ಲಿರುವ ಸಂಯುಕ್ತ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಾರು ಕೈಗಾರಿಕೆ

2547 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನಲ್ಲಿರುವ ಸಹಭಾಗತ್ವದ ತೆಂಗಿನ ನಾರಿನ ಕೈಗಾರಿಕೆಯು ಕ್ರಮಬದ್ಧವಾಗಿ ನಡೆಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಳೆಯದಾದ ಯಂತ್ರೋಪಕರಣಗಳ ವಿಲೇವಾರಿಯಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರದಿಂದ ಈ ಘಟಕಕ್ಕೆ ಬಿಡುಗಡೆ ಮಾಡಲಾದ ಸಹಾಯಧನ?

ಈ) ಸಹಾಯಧನದ ಹಣವನ್ನು ಕ್ರಮಬದ್ಧವಾಗಿ, ಉಪಯೋಗಿಸಲಾಗಿದೆಯೇ ಮತ್ತು ಈ ಬಾಬ್ತು ಲೆಕ್ಕಪತ್ರಗಳನ್ನು ಇಡಲಾಗಿದೆಯೇ?

ಉ) ಸದರಿ ಕೈಗಾರಿಕೆಯ ಪ್ರಕರಣದಲ್ಲಿ ಸರ್ಕಾರವು ತನಿಖೆ ನಡೆಸುವುದೇ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಈ ಘಟಕಕ್ಕೆ ದಿನಾಂಕ 30-12-89ರಂದು ಮಂಜೂರು ಮಾಡಲಾದ ಒಟ್ಟು ಹಣ ರೂ. 14.24 ಲಕ್ಷ ರೂ.ಗಳು ರಾಜ್ಯ ಸಹಾಯಧನದ ಬಾಬ್ತು ರೂ.7.5 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಈ) ದಿನಾಂಕ 30-12-89 ರಂದು ಈ ಘಟಕಕ್ಕೆ 14.24 ಲಕ್ಷ ರೂ.ಗಳ ರಾಜ್ಯ ಸಹಾಯಧನ ಮಂಜೂರಾಗಿದ್ದರೂ ಸಹ ದಿನಾಂಕ 2-8-91ರಂದು ಕೆ.ಎಸ್.ಐ.ಐ.ಡಿ.ಸಿ. ಮುಖೇನ 7.5 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸಿದೆ. ಘಟಕವು ಈ ಹಣದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಹಣ ಬಿಡುಗಡೆಗೊಳಿಸುವ ದಿನಾಂಕದಿಂದ 6 ತಿಂಗಳೊಳಗೆ ಸಲ್ಲಿಸಬೇಕಾಗಿದ್ದು, ಘಟಕದಿಂದ ಇದನ್ನು ಇಷ್ಟರಲ್ಲೇ ಪಡೆದುಕೊಳ್ಳಲಾಗುವುದು.

ಉ) ವಾರ್ಷಿಕ 750 ಮೆಟ್ರಿಕ್ ಟನ್‌ಗಳಷ್ಟು ರಬ್ಬರ್ ರೈಸ್ಡ್ ಕಾಯಲ್ ತಯಾರಿಸುವ ಸಾಮರ್ಥ್ಯವುಳ್ಳ ಈ ಘಟಕದ ಯೋಜನಾ ವೆಚ್ಚವು 96 ಲಕ್ಷ ರೂ.ಗಳಾಗಿದ್ದು, ಈ ಪೈಕಿ ಕೆ.ಎಸ್.ಐ.ಐ.ಡಿ.ಸಿ. ಯಿಂದ 60.00 ಲಕ್ಷ ರೂ.ಗಳ ಅವಧಿ ಸಾಲ ಹಾಗೂ ಕರ್ನಾಟಕ ನಾರು ಅಭಿವೃದ್ಧಿ ನಿಗಮ ನಿಯಮಿತ ದಿಂದ 2.50 ಲಕ್ಷ ರೂ.ಗಳ ಈಕ್ವಿಟಿ ಷೇರು ಬಂಡವಾಳವಾಗಿ ಪಡೆದುಕೊಂಡಿದೆ. ಈ ಘಟಕವು ದಿನಾಂಕ 1-10-90ರಿಂದ ಉತ್ಪಾದನೆಯಲ್ಲಿ ತೊಡಗಿದ್ದು 1991ನೇ ವರ್ಷದಲ್ಲಿ 107.61 ಮೆಟ್ರಿಕ್ ಟನ್‌ಗಳಷ್ಟು 38.45 ಲಕ್ಷ ರೂ.ಗಳ ಮೌಲ್ಯದ ರಬ್ಬರ್ ರೈಸ್ಡ್

ಕಾಯರ್‌ನ್ನು ಉತ್ಪಾದಿಸಲಾಗಿದೆ. ಘಟಕವು ಚಾಲನೆಯಲ್ಲಿರುವಾಗ ಯಾವುದೇ ವಿಚಾರಣೆ ನಡೆಸುವ ಪ್ರಮೇಯ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ. ಪುಟ್ಟಸ್ವಾಮಿಗೌಡ : (ಆರೋಗ್ಯ ಹಾಗೂ ಕುಟುಂಬಕಲ್ಯಾಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 6-9-1991ರಂದು ಲಿಖಿತ ಮೂಲಕ ಉತ್ತರಿಸುವ 56 ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಬಾಲ ಕಾರ್ಮಿಕರ ಕಲ್ಯಾಣದ ಬಗ್ಗೆ.

2393 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಾರ್ಮಿಕ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಬಾಲ ಕಾರ್ಮಿಕರು ಎದುರಿಸುತ್ತಿರುವ ಸಂಕಷ್ಟಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಯಾವುದಾದರೂ ನಿಗದಿತ ಕಾರ್ಯಕ್ರಮಗಳನ್ನು ರೂಪಿಸಿದೆಯೇ ? ಹಾಗಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು ?

ಇ) ಇವರುಗಳ ಕಲ್ಯಾಣ ಕಾರ್ಯಗಳಿಗಾಗಿ ಬಜೆಟ್‌ನಲ್ಲಿ ಹಣವನ್ನೇನಾದರೂ ಮೀಸಲಾಗಿಡಲಾಗಿದೆಯೇ ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

ಅ) ಹೌದು.

ಆ) ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ಹೊಸ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ರೂ. 10 ಲಕ್ಷವನ್ನು 1991-92ನೇ ಸಾಲಿಗೆ ಮೀಸಲಾಗಿಡಲಾಗಿದೆ.

ದ. ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೋದ್ಯಮಗಳಿಗೆ ಸಬ್ಸಿಡಿ

2392 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೋದ್ಯಮಗಳು ಸಣ್ಣ ಕೈಗಾರಿಕೋದ್ಯಮಗಳು ಮತ್ತಿತರರಿಗೆ ನೀಡಬೇಕಾಗಿರುವ ಸಬ್ಸಿಡಿಯ ಬಾಕಿ ಮೊತ್ತವೆಷ್ಟು ?

ಆ) ಆ ಸಬ್ಸಿಡಿಯ ಶೀಘ್ರ ವಿಲೇವಾರಿಗಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ರೂ. 179.28 ಲಕ್ಷಗಳು

ಆ) ದಕ್ಷಿಣ ಕನ್ನಡ ಜಿಲ್ಲೆಗೆ ರೂ. 43.19 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಹಣದಿಂದ ಮಾರ್ಚ್ 1989 ರವರೆಗಿನ ಎಲ್ಲಾ ಮಂಜೂರಾದ ಘಟಕಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಏಪ್ರಿಲ್ 1989ರ ಮತ್ತು ಮುಂದಕ್ಕೆ